ದಿನಾಂಕ 27-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದಃ-

ದಾವೆಯಲ್ಲಿ ತೋರಿಸಿರುವ 8, 11 ರಿಂದ 14 ಐಟಂ ಆಸ್ತಿಗಳನ್ನು ತಿಮ್ಮಯ್ಯನವರು 1980 ರಲ್ಲಿ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಖರೀದಿ ಮಾಡಿದ ನಂತರ ಸ್ವಾಧೀನದಲ್ಲಿದ್ದಾರೆ ಎಂದರೆ ನಿಜ. ತಿಮ್ಮಯ್ಯನವರು ಇದ್ದಾಗ ಕ್ರಯ ಆಗಿಲ್ಲ ಅವರು ಒಪ್ಪಿಲ್ಲ. ಆ ಆಸ್ತಿ ಸಾಗುವಳಿ ಮಾಡಲು ಆಗುವುದಿಲ್ಲ ಎಂದು ಮಾರಾಟ ಮಾಡಿದರು ಎಂದರೆ ಸರಿಯಲ್ಲ. ತಿಮ್ಮಯ್ಯನವರಿಗೆ ದಿನಾಂಕ 26-04-1994 ರಲ್ಲಿ 10 ಸಾವಿರ ಹಣವನ್ನು ಕೊಟ್ಟರು ಎಂದರೆ ಸರಿಯಲ್ಲ. ತಿಮ್ಮಯ್ಯನವರಿಗೆ ದಿನಾಂಕ 26-04-1994 ರಲ್ಲಿ ಚೆಕ್ ಮೂಲಕ 90 ಸಾವಿರ ಹಣವನ್ನು ಕೊಟ್ಟರು ಎಂದರೆ ಸರಿಯಲ್ಲ. ದಿನಾಂಕ 07-07-1994 ರಂದು ಚೆಕ್ ಮೂಲಕ ರೂ.2,65,000/- ಉಳಿಕೆ ಹಣವನ್ನು ಕೊಟ್ಟು ಕ್ರಯಪತ್ರವನ್ನು ಬರೆಸಿಕೊಂಡರು ಎಂದರೆ ಸರಿಯಲ್ಲ. ಕರಾರನು ಬರೆಸಿ ಆಸ್ತಿಯನ್ನು ಸ್ವಾಧೀನಕ್ಕೆ ಕೊಟ್ಟರು ಎಂದರೆ ಸರಿಯಲ್ಲ. ಭೂಮಿಯು ವಿತರಣೆಗೆ ತೊಂದರೆ ಇದ್ದ ಕಾರಣ ತಿಮ್ಮಯ್ಯನವರು ಕ್ರಯ ಮಾಡಲು ಮುಂದೆ ಬಂದರು ಎಂದರೆ ಸರಿಯಲ್ಲ. ತಿಮ್ಮಯ್ಯನವರು 2 ನೇ ಪ್ರತಿವಾದಿಯ ಸ್ವಾಧೀನಕ್ಕೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿನಾಂಕ 05.11.1994 ರಲ್ಲಿ ತಿಮ್ಮಯ್ಯನವರು ಮೃತರಾದ ವಿಷಯ ಗೊತ್ತು. ತಿಮ್ಮಯ್ಯನವರು ಮೃತರಾದ ನಂತರ ಅವರ ಹೆಂಡತಿ ತಂಗಮ್ಮ ಮತ್ತು 1 ನೇ ಪ್ರತಿವಾದಿ ಕ್ರಯಪತ್ರ ಮಾಡಿಕೊಟ್ಟರು ಎಂದರೆ ನಿಜ. ಆ ಕ್ರಯಪತ್ರವನ್ನು ನಾನು ಓದಿ ನೋಡಿಲ್ಲ. ಕ್ರಯಪತ್ರದ ಪ್ರಕಾರ ಆರ್.ಟಿ.ಸಿ 2 ನೇ ಪ್ರತಿವಾದಿಯ ಹೆಸರಿಗೆ ಆಗಿದೆ ಎಂದರೆ ನಿಜ. 3 ನೇ ಪ್ರತಿವಾದಿ ಇದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಕರಾರು ಮತ್ತು ಕ್ರಯಪತ್ರ ಆಗಿಲ್ಲ ಎನ್ನುತ್ತಾರೆ. ದಿನಾಂಕ 18-11-1994 ರಲ್ಲಿರುವ ಕರಾರಿನಲ್ಲಿರುವ ಸಹಿಗಳು ನನ್ನ ತಾಯಿ ರಾಧರವರದ್ದಲ್ಲ. ರಾಧರವರು 1 ನೇ ಪ್ರತಿವಾದಿಗೆ ಮಾಡಿಕೊಟ್ಟ ಕ್ರಯಪತ್ರ ನನಗೆ ಗೊತ್ತಿಲ್ಲ. ನೋಂದಣಿ ವಿಭಾಗವಾದ ನಂತರ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನೋಂದಣಿ ಪತ್ರ ಮಾಡಿಕೊಟ್ಟಿಲ್ಲ ಎನ್ನುತ್ತಾರೆ. ತಂಗಮ್ಮನವರು 2001 ರಲ್ಲಿ ತೀರಿ ಹೋಗಿದ್ದಾರೆ. ವಾದಿ ಮದುವೆಯಾದ ನಂತರ ಬಂದು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮತ್ತು ಅವರ ಗಂಡನಿಗೆ ರೂ.365000/-ಕ್ಕೆ ಆಸ್ತಿಯನ್ನು

ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ತಂಗಮ್ಮ ಮತ್ತು 1 ನೇ ಪ್ರತಿವಾದಿ ಕ್ರಯಪತ್ರವನ್ನು ಮಾಡಿಕೊಟ್ಟರು ಎಂದರೆ ಸರಿಯಲ್ಲ. ಕ್ರಯಪತ್ರವಾದ ನಂತರ ರೆವಿನ್ಯೂ ಕಛೇರಿಯಲ್ಲಿ ಜಮಾಬಂಧಿಯಾಗಿ ಖಾತೆಯಾಗಿದೆ ಎಂದರೆ ಎಲ್ಲವನ್ನು ಫೋರ್ಜರಿ ಮಾಡಿದ್ದಾರೆ ಎನ್ನುತ್ತಾರೆ. ದಿನಾಂಕ 11-08-1981 ರಲ್ಲಿ ಪಾಲು ಪಾರಿಕತ್ ಆಗಿದೆಯಾ ಎಂರದೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1977-1978 ರಲ್ಲಿ ವಿಲ್ಲು ಮಾಡಿದ್ದನ್ನು ರದ್ದು ಮಾಡಿದ್ದಾರೆ ಎನ್ನುತ್ತಾರೆ. ದಿಃ 29-05-1995 ರಲ್ಲಿ ಪುನಃ ಮೂರು ಲಕ್ಷವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮಾರಿರುವ ಆಸ್ತಿಯನ್ನು ಬಿಟ್ಟು ಕೆಲವು ಆಸ್ತಿಗಳು ನನ್ನ ಚಿಕ್ಕಮ್ಮನ ಸ್ವಾಧೀನದಲ್ಲಿದೆ. ದಾವೆಗೆ ಸಂಬಂಧಪಟ್ಟ ಆಸ್ತಿಗಳು ವಾದಿಯ ಸ್ವಾಧೀನದಲ್ಲಿ ಯಾವುದಾದರು ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ಆ ಆಸ್ತಿಗಳು ನನ್ನ ಚಿಕ್ಕಮ್ಮ 1 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ. ಅವುಗಳ ಆರ್ ಟಿ ಸಿ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ನನ್ನ ತಾತ ತಿಮ್ಮಯ್ಯನವರ ಹೆಸರಿನಲ್ಲಿಯೂ ಇದೆ. ಸರ್ವೆ ನಂ.96/10 ರಲ್ಲಿ 1 ನೇ ಪ್ರತಿವಾದಿ ಸ್ವಾ ಧೀನ ಇದ್ದಾರೆ. ಆರ್ ಟಿ ಸಿಯಲ್ಲಿ ಯಾರ ಹೆಸರು ಇದೆ ಎಂದು ನಾನು ನೋಡಿಲ್ಲ ನನ್ನ ತಾಯಿ ನೋಡಿದ್ದಾರೆ. ಕಂದಾಯನ್ನು ಅವರೇ ಕಟ್ಟುತ್ತಿದ್ದಾರೆ. ದಾವೆ ಹಾಕುವಾಗ 1 ನೇ ಪ್ರತಿವಾದಿಯ ಸ್ವಾ ಧೀನದಲ್ಲಿ ಯಾವ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಗೊತ್ತು. ಯಾವ ಯಾವ ಆಸ್ತಿಗಳು 2 ಮತ್ತು 3 ನೇ ಪ್ರತಿವಾದಿಗಳ ಸ್ವಾಧೀನದಲ್ಲಿದ್ದವು ಎಂದು ಹೇಳಲು ಬರುವುದಿಲ್ಲ. ದಾವೆ ಹಾಕಲು ಮಾಹಿತಿಯನ್ನು ನನ್ನ ತಾಯಿ ಕೊಟ್ಟರು. 2012 ರಲ್ಲಿ ನಾವು ವಿಷಯವನ್ನು ಸಂಗ್ರಹಿಸಿದೆವು. ದಾವಾಸ್ತಿಗಳು ಈಗ 1 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿಗಳ ಹೆಸರಿನಲ್ಲಿವೆ. ಪೆಮ್ಮಯ್ಯನ ಹೆಂಡತಿ ಮತ್ತು ಮಕ್ಕಳು 2 ನೇ ಪ್ರತಿವಾದಿಗೆ ಎಷ್ಟು ಹಣಕ್ಕೆ ಆಸ್ತಿಗಳನ್ನು ಮಾರಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಎಷ್ಟು ಎಕರೆ ಆಸ್ತಿ ಇದೆ ಎಂದು ಹೇಳಲು ಆಗುವುದಿಲ್ಲ. ನನಗೆ ಈ ಕೇಸಿನ ಬಗ್ಗೆ ವೈಯುಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ನೋಡಿ ಸಾಕ್ಷಿ ಹೇಳುತ್ತಿದ್ದೇನೆ.

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೇ ಸ ಇ ಎ ಒ.

ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂಃ ವಿರಾಜಪೇಟೆ.

ಓಎಸ್. 35/2013
ಪಿಡಬ್ಲ್ಯೂ-1

(ಸಾಕ್ಷಿದಾರರ ಸಹಿ)